ಇ) ಸುಮಾರು ೨೫೦ ಲಕ್ಷ ರೂ.ಗಳು ಬೇಕಾಗುತ್ತದೆ.

ಈ) ಮಾರ್ಚ್ ೧೯೯೨ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸಾರಿಗೆ ಸಂಸ್ಥೆಯಲ್ಲಿ ಕುಡಿದು ಚಾಲನೆ ಮಾಡುವವರ ಮೇಲೆ ಕೈಗೊಂಡಿರುವ ಕ್ರಮ

೯೪೪ (೧೪೬೮) ಶ್ರೀ ಪಿ ಜಿ. ಆರ್. ಸಿಂಧ್ಯಾ(ಕನಕಪುರ). ಮಾನ್ಯ ಸಾರಿಗೆಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸಾರಿಗೆ ಸಂಸ್ಥೆಯಲ್ಲಿ ವಾಹನ ಚಾಲಕರು ಕುಡಿದು ಚಾಲನೆ ಮಾಡುವ ಬಗ್ಗೆ ದೂರುಗಳು ಬಂದಿದೆಯೇ ?

ಆ) ಬಂದಿದ್ದರೆ ಇದನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹೌದು.

ಆ) ೧೯೯೧–೯೦ನೇ ಸಾಲಿನಲ್ಲಿ ೪೦ ಪ್ರಕರಣಗಳು ಕುಡಿದು ಚಾಲನೆ ಮಾಡಿದ ಬಗ್ಗೆ ಪರದಿಯಾಗಿದ್ದು ೧೧ ಪ್ರಕರಣಗಳಲ್ಲಿ ಸಂಸ್ಥೆಯ ಶಿಸ್ತು ಮತ್ತು ನಡತೆ ನಿಯಮಾವಳಿಯ ಪ್ರಕಾರ ದಂಡ ಹಾಕುವುದು ವೇತನ ಕಡಿತಗೊಳಿಸುವಂತಹ ಶಿಸ್ತಿನ ಕ್ರಮ ಜರುಗಿಸಲಾಗಿದೆ. ಎರಡು ಪ್ರಕರಣಗಳಲ್ಲಿ ಚಾಲಕರನ್ನು ಸೇವೆಯಿಂದ ವಜಾ ಮಾಡಲಾಗಿದೆ ಇನ್ನುಳಿದ ಪ್ರಕರಣಗಳಲ್ಲಿ ಶಿಸ್ತಿನ ಕ್ರಮ ಜರುಗಿಸುವ ನಡವಳಿಕೆಯನ್ನು ಜಾರಿ ಮಾಡಿದ್ದು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಮೋಟಾರು ವಾಹನ ಇಲಾಖೆಯಲ್ಲಿರುವ ಚೆಕ್‌ಪೋಸ್ಟುಗಳು

೯೪೫ (೧೨೬೯) ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಮೋಟಾರು ವಾಹನ ಇಲಾಖೆಯ ನಿಯಂತ್ರಣದಲ್ಲಿ ಬರುವ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಕಳೆದ ೩ ವರ್ಷಗಳಲ್ಲಿ ಇವುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ರಾಜ್ಯದಲ್ಲಿ ಮೋಟಾರು ವಾಹನ ಇಲಾಖೆಯ ಅಧ್ವರ್ಯದಲ್ಲಿ ಈ ಕೆಳಕಂಡ ೧೧ ಚೆಕ್‌ಪೋಸ್ಟ್‌ಗಳು ಕೆಲಸ ಮಾಡುತ್ತಿವೆ.

			ಪ್ರಾರಂಭ
೧) ಅತ್ತಿಬೆಲೆ	—	ಬೆಂಗಳೂರು ಜಿಲ್ಲೆ	೫–೧–೮೫
೨) ನಂಗ್ಲಿ	—	ಕೋಲಾರ ಜಿಲ್ಲೆ	೧–೧೧–೮೯
೩) ಬಾಗೇಪಲ್ಲಿ	—	ಕೋಲಾರ ಜಿಲ್ಲೆ	೧–೧೧–೮೯
೪) ಗುಂಡ್ಲುಪೇಟೆ	—	ಮೈಸೂರು ಜಿಲ್ಲೆ	೧–೧೨–೮೪
೫) ಮಾಕುಟ	—	ಕೊಡಗು ಜಿಲ್ಲೆ	೧–೧೦–೮೯
೬) ಹುಮ್ನಾಬಾದ್	—	ಬೀದರ್ ಜಿಲ್ಲೆ	೨೬–೧೧–೮೪